ಮೊದಲಾಗಿ ಇನ್ನಿತರ ಸಂಸ್ಕೃತ ಪಠ್ಯಗಳೂ ಕರತಲಾಮಲಕವಾಗಿದ್ದವು. ಈ ಬಗೆಯ ಅಧ್ಯಾಪಕರು ಕರ್ನಾಟಕದ ಅನೇಕ ಭಾಗಗಳಲ್ಲಿ ಆ ಕಾಲಕ್ಕೆ ಇದ್ದರಲ್ಲ! ವಿಪರ್ಯಾಸದ ಸಂಗತಿ ಎಂದರೆ ಇದೀಗ ವಿಶ್ವವಿದ್ಯಾಲಯ, ಕಾಲೇಜುಗಳಲ್ಲಿ ಹಳಗನ್ನಡ ಉಳಿಸಿ, ತತ್ಸಂಬಂಧದ ಆಸಕ್ತಿ ಬೆಳೆಸಿ ಎಂದು ಹೇಳುವ ಸ್ಥಿತಿ ಒದಗಿಬಂದಿದೆಯಲ್ಲಾ; ಅದನ್ನು ಓದಬೇಕೇ ಬಿಡಬೇಕೆ ಎಂಬ ದ್ವಂದ್ವ ಸ್ಥಿತಿಯೂ ಹುಟ್ಟಿಕೊಂಡಿದೆ.

- ಮಂಟೆಸ್ವಾಮಿ, ಮಲೆ ಮಹದೇಶ್ವರ, ಜುಂಜಪ್ಪ, ಬಿಳಿಗಿರಿ ರಂಗ, ತಿಪ್ಪೇಸ್ವಾಮಿ ಮುಂತಾದವರು ನೆಲಮೂಲ ಸಂಸ್ಕೃತಿಯ ನಾಯಕರಾಗಿ ಜನಮಾನಸದಲ್ಲಿದ್ದಾರೆ. ಇಂತಹ ಪ್ರತಿ ಸಂಸ್ಕೃತಿ ನಾಯಕರ ಕಾವ್ಯಗಳನ್ನು ಅದನ್ನು ಹಾಡುವ ಕಲಾವಿದರ ಮೂಲಕ ನಾಡಿಗೆ ಪರಿಚಯಿಸುವ ಕಾರ್ಯವನ್ನು ತರಗತಿ– ವೇದಿಕೆ –ಮಾಧ್ಯಮಗಳ ಮೂಲಕ ನೀವು ಮಾಡುತ್ತಿರುವಿರಿ. ಈ ಕುರಿತು ಅಧ್ಯಯನದ ಹಲವು ಆವೃತ್ತಿಗಳು, ಗಾಯನ ಪರಂಪರೆಗಳು ಬೆಳೆದು ಬಂದಿವೆ. ಈ ಪರಂಪರೆಗಳ ವೈವಿಧ್ಯ ಮತ್ತು ಹಾಡುವಿಕೆಗಳ ಮೂಲಕ ನಾವು ಅರ್ಥೈಸಿಕೊಳ್ಳಬೇಕಿರುವುದು ಏನನ್ನು?

ನಿಜಕ್ಕೂ 'ಮಲೆಯ ಮಹದೇಶ್ವರ', 'ಮಂಟೇಸ್ವಾಮಿ', 'ಬಿಳಿಗಿರಿ ರಂಗ', 'ನಂಜುಂಡೇಶ್ವರ', 'ಜುಂಜಪ್ಪ', ದಕ್ಷಿಣ ಕನ್ನಡ ಜಿಲ್ಲೆಯ 'ಸಿರಿಪಾಡ್ದನ', ಉತ್ತರ ಕರ್ನಾಟಕದ 'ಹಾಲುಮತ ಕಾವ್ಯ' ಇವೆಲ್ಲವನ್ನೂ ನಮ್ಮ ಜನಪದರು ವಾಕ್ ಪರಂಪರೆಯಲ್ಲಿಯೇ ಉಳಿಸಿಕೊಂಡು ಬಂದಿದ್ದಾರೆ. ನಾವು ಬರೆದ ಕತೆ, ಕಾದಂಬರಿ, ನಾಟಕ, ಕಾವ್ಯಪ್ರಕಾರಗಳಿಗೆ ಎಷ್ಟು ಜನ ಓದುಗರಿದ್ದಾರೋ ಹೇಳುವುದು ಕಷ್ಟ. ಆಧುನಿಕ ಸಂದರ್ಭದಲ್ಲಿ ಹುಟ್ಟಿಕೊಂಡ ಮಹಾಕಾವ್ಯಗಳನ್ನೂ ಜನ ಓದುವಂತೆ, ಚರ್ಚಿಸುವಂತೆ ಕಾಣಿಸುತ್ತಿಲ್ಲ. ಇನ್ನು ಅವು ಜನಪದರನ್ನು ಮುಟ್ಟುವುದುಂಟೆ? ಆದರೆ ಈ ಹೊತ್ತಿಗೂ ಮಲೆಯ ಮಹದೇಶ್ವರನ ಸಂಕವ್ವನ ಹಾಡು, ಮಂಟೇಸ್ವಾಮಿ ಕಥನದ ಕಲ್ಯಾಣಪಟ್ಟಣದ ಸಾಲು ಭಾಗವನ್ನು ಮಧ್ಯಕರ್ನಾಟಕದಲ್ಲಿ ಜುಂಜಪ್ಪನ ಕಥನವನ್ನು ಅಸಂಖ್ಯಾತರು ಹಾಡುವಂತೆಯೇ ಅಷ್ಟೇ ಸಾವಿರ ಸಂಖ್ಯೆಯ ಕೇಳುಗರೂ ಇದ್ದಾರೆ. ನಾವು ಅಕ್ಷರ ಕಲಿತವರು ಅದನ್ನು ಆರಾಧನಾ ಭಾವದಿಂದ ಕೇಳುವುದಿಲ್ಲ ಅಂದರೂ ಆ ಬಗೆಯ ಸಾಂಸ್ಕೃತಿಕ ನಾಯಕರನ್ನು ಸ್ಥಳೀಯ ಚರಿತ್ರೆಯ ಹಿನ್ನೆಲೆಯಲ್ಲಿ ಅರಿಯಬೇಕಲ್ಲವೇ? ನಮ್ಮ ಸುತ್ತಲಿನ ಸಂಗತಿಗಳನ್ನು ಅರಿಯದೆ ಪ್ರಪಂಚದ ಚರಿತ್ರೆಯನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಇದು ಕನ್ನಡ ಓದಿದರೆ ನಾವು ಉದ್ಧಾರವಾಗುವುದಿಲ್ಲ, ಇಂಗ್ಲಿಷ್ ಓದಿದರೆ ಜಗತ್ತಿನ ಮೇಲೆ ಜಯಗಳಿಸಿಬಿಡುತ್ತೇವೆ ಎಂಬ ಎರಡು ತುದಿಯ ಮಾತು ಇದ್ದಂತೆ. ಎಲ್ಲ ಸಂಗತಿಗಳನ್ನು ತೀವ್ರಥರದಲ್ಲಿ ಅವಲೋಕಿಸಿ ಸ್ವೀಕರಿಸಬೇಕಾದ ಅಗತ್ಯವಿದೆ. ನಮ್ಮೊಡನೆ ಸಾಗಿ ಬಂದ ಸಾಂಸ್ಕೃತಿಕ ಪರಂಪರೆ ನಮ್ಮ ಅಂತರಂಗಕ್ಕೆ ಸಂಬಂಧಿಸಿದ್ದು, ಇಂಗ್ಲಿಷ್ ಇನ್ನಿತರ ಜ್ಞಾನ ಸಂಪರ್ಕಕ್ಕೆ ಬೇಕಾದದ್ದು. ಹಾಗಾಗಿ ಮಾಧ್ಯಮಗಳಲ್ಲಿ ಬಿತ್ತರಗೊಳ್ಳುವ ಸಾಹಿತ್ಯಕ್ಕಿಂತ ಜನಪದ ಹಾಡುಗಾರಿಕೆಯೂ ಹೀಗಿದೆ ಕೇಳಿ ಎನ್ನುವುದು ನನ್ನ ಉದ್ದೇಶ. ನಾನೊಮ್ಮೆ ಕೇರಳದ ಪ್ರಸಿದ್ಧ ರಂಗನಿರ್ದೇಶಕ ಕಾವಲಂ ಫಣಿಕ್ಕರ್ ಐಯ್ಯರ್ ಅವರ ನಾಟಕ ನೋಡಿದ ನಂತರ, ಈ ಸಂಸ್ಕೃತ ಮತ್ತು ರಾಮಾಯಣ ಹಿನ್ನೆಲೆಯ ನಾಟಕವನ್ನು ಯಾಕೆ ನಿರ್ದೇಶಿಸಿದಿರಿ ಎಂದು ಕೇಳಿದೆ. 'ಮತ್ತ್ಯಾವ ನಾಟಕವನ್ನು ಮಾಡಲಿ ಹೇಳಿ, ಶೇಕ್ಸ್ಪಿಯರನನ್ನು ಮಾಡಿದರೆ ನಮಗಿಂತಲೂ ಉತ್ತಮ ನಿರ್ದೇಶನವನ್ನು ಆಯಾ ದೇಶದವರೇ ಮಾಡಿರುತ್ತಾರಲ್ಲಾ. ನಾವು ಮಾಡುವುದೇನಿದೆ? ನಮ್ಮದನ್ನೇ ನಾವು ಸಮರ್ಥವಾಗಿ